ಬೀದರ್ ಜಿಲ್ಲೆಯ ಲಂಬಾಣಿ ತಾಂಡಾಗಳಿಗೆ ವಿದ್ಯುತ್ ಸೌಕರ್ಯ

243 - ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯಲ್ಲಿ ಈ ವರ್ಷ ಎಷ್ಟು ಲಂಬಾಣಿ ತಾಂಡಾಗಳು , ಮಜರಹಳ್ಳಿಗಳು ಹಾಗೂ ಎಷ್ಟು ಗ್ರಾಮಾಗಳಿಗೆ ವಿದ್ಯುದ್ದೀಕರಣ ಮಾಡುವ ಗುರಿಯನ್ನು ಹೊಂದಲಾಗಿದೆ?

ಆ) ಆ ಪೈಕಿ ಇದುವರೆವಿಗೆ ಮೇಲ್ಕಂಡ ಎಷ್ಟು ಸ್ಥಳಗಳಿಗೆ ವಿದ್ಯುದ್ದೀಕರಣ ಮಾಡಲಾಗಿದೆ?

ಇ) ಇದಕ್ಕಾಗಿ ವೆಚ್ಚವಾದ ಹಣವೆಷ್ಟು?

ಈ) ಈ ವರ್ಷ ಜಿಲ್ಲೆಯ ಎಷ್ಟು ಭಾಗಗಳಿಗೆ ವಿದ್ಯುದ್ದೀಕರಣ ಮಾಡುವ ವಿಚಾರ ಸರ್ಕಾರದ ಮುಂದಿದೆ? ಹಾಗೂ ಇದಕ್ಕಾಗಿ ಮೀಸಲಾಗಿಟ್ಟಿರುವ ಹಣವೆಷ್ಟು?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) ಬೀದರ್ ಜಿಲ್ಲೆಯಲ್ಲಿ ಈ ವರ್ಷ 31 ಲಂಬಾಣಿ ತಾಂಡಾಗಳನ್ನು ವಿದ್ಯುದ್ದೀಕರಿಸಲು ಗುರಿ ಹೊಂದಿದೆ. ಈ ಜಿಲ್ಲೆಯಲ್ಲಿ ಮಜರ್ ಹಳ್ಳಿಗಳ ವಿದ್ಯುದ್ದೀಕರಣಕ್ಕೆ ಗುರಿ ಇಲ್ಲ. ಮತ್ತು 1981ರ ಜನಗಣತಿ ಪ್ರಕಾರ, ಈ ಜಿಲ್ಲೆಯಲ್ಲಿರುವ ಎಲ್ಲಾ 593 ಜನ ನಿವಾಸಿ ಕಂದಾಯ ಗ್ರಾಮಗಳನ್ನು ವಿದ್ಯುದ್ದೀಕರಿಸಲಾಗಿದೆ. ಆದ್ದರಿಂದ ಕಂದಾಯ ಗ್ರಾಮಗಳ ವಿದ್ಯುದ್ದೀಕರಣಕ್ಕೆ ಗುರಿ ಇಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಆ) ಫೆಬ್ರುವರಿ 1991ರ ಅಂತ್ಯದವರೆವಿಗೆ 18 ಲಂಬಾಣಿ ತಾಂಡಾಗಳನ್ನು ವಿದ್ಯುದ್ದೀಕರಿಸಲಾಗಿದೆ. ಮಜರ್ ಹಳ್ಳಿ ವಿದ್ಯುದ್ದೀಕರಣಕ್ಕೆ ಗುರಿಯನ್ನು ನಿಗದಿ ಪಡಿಸದೇ ಇರುವುದರಿಂದ ಇವುಗಳ ವಿದ್ಯುದ್ದೀಕರಣದ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಇದುವರೆವಿಗೆ 22.6 ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡಲಾಗಿದೆ.

ಈ) ಈ ವರ್ಷ ಈ ಜಿಲ್ಲೆಯಲ್ಲಿ 31 ಲಂಬಾಣಿ ತಾಂಡಾಗಳನ್ನು ವಿದ್ಯುದ್ದೀಕರಿಸಲು ಗುರಿ ನಿಗದಿ ಪಡಿಸಿದೆ. ಹಾಗೂ ಇದಕ್ಕಾಗಿ ಮೀಸಲಾಗಿಟ್ಟಿರುವ ಹಣದ ಮೊತ್ತ 29.85 ಲಕ್ಷ ರೂಪಾಯಿಗಳು.

ಬಚಾವತ್ ತೀರ್ಪಿನಿಂದ ರಾಜ್ಯದ ನೀರಿನ ಪ್ರಮಾಣ

244 - ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಚಾವತ್ ತೀರ್ಪಿನಂತೆ ಗೋದಾವರಿ ಬೇಸನ್‌ಗೆ ಬರತಕ್ಕಂತಹ ನೀರಿನ ಪ್ರಮಾಣವೆಷ್ಟು?

ಆ) ನಿಜಾಂ ಸಾಗರದೊಳಗೆ ಹರಿಯುವ ನೀರಿನ ಪ್ರಮಾಣವೆಷ್ಟು?

ಇ) ನಿಜಾಂ ಸಾಗರದ ಕೆಳಗೆ ಹರಿಯುವ ನೀರಿನ ಪ್ರಮಾಣವೆಷ್ಟು?

ಈ) ಗೋದಾವರಿ ಬೇಸಿನ್‌ನಲ್ಲಿರತಕ್ಕಂತಹ ನೀರು ಯಾವ ಯಾವ ಜಿಲ್ಲೆಗಳಿಗೆ ಬರುತ್ತದೆ?

ಉ) ಇವತ್ತಿನವರೆವಿಗೂ ಎಷ್ಟು ಟಿ.ಎಂ.ಸಿ.ಯ ನೀರನ್ನು ಉಪಯೋಗ ಮಾಡಲಾಗಿದೆ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) ಕರ್ನಾಟಕಕ್ಕೆ 22.37 ಟಿ.ಎಂ.ಸಿ.

ಆ) ಮಾಹಿತಿ ನಮ್ಮಲ್ಲಿಲ್ಲ.

ಇ) ಮಾಹಿತಿ ನಮ್ಮಲ್ಲಿಲ್ಲ.

ಈ) ಬೀದರ್ ಜಿಲ್ಲೆಗೆ ಮಾತ್ರ.

ಉ) ಕರ್ನಾಟಕದಲ್ಲಿ ಈಗ ಉಪಯೋಗಿಸಲ್ಪಡುತ್ತಿರುವ ನೀರಿನ ಪ್ರಮಾಣ 4.60 ಟಿ.ಎಂ.ಸಿ.

ಬಚಾವತ್ ತೀರ್ಪಿನಂತೆ 2000ನೇ ಇಸವಿಯೊಳಗೆ ಕಷ್ಣಾ ನದಿಯ ನೀರಿನ ಬಳಕೆ

245 - ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಚಾವತ್ ತೀರ್ಪಿನಂತೆ 2000ನೇ ಇಸವಿಯೊಳಗೆ ತನ್ನ ಪಾಲಿನ ಕೃಷ್ಣಾ ನದಿಯ ನೀರನ್ನು ಪೂರ್ಣವಾಗಿ ಬಳಸಿಕೊಳ್ಳಲು ರಾಜ್ಯ ಸರ್ಕಾರದ ಮುಂದಿರುವ ಕಾರ್ಯಕ್ರಮಗಳೇನು?

ಆ) ಇದುವರೆವಿಗೂ ರಾಜ್ಯ ಸರ್ಕಾರ ಕೃಷ್ಣಾ ನದಿಯಿಂದ ಎಷ್ಟು ಟಿ.ಎಂ.ಸಿ. ನೀರನ್ನು ಉಪಯೋಗಿಸಿಕೊಂಡಿದೆ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) ರಾಜ್ಯದ ಪಾಲಿನ ನೀರನ್ನು ಬಳಸಲು ಒಂದು ಸಮಗ್ರ ಯೋಜನೆಯನ್ನು ತಯಾರು ಮಾಡಲಾಗಿದ್ದು, ಅದನ್ನು 2000 ಇಸವಿಯೊಳಗೆ ಕಾರ್ಯರೂಪಕ್ಕೆ ತರಲು ಪ್ರಯತ್ನ ಮಾಡಲಾಗುತ್ತಿದೆ.

ಆ) ಈಗ ಮುಗಿಸಿರುವ ಯೋಜನೆಗಳಿಂದ ಮತ್ತು ಭಾಗಶಃ ಕಾರ್ಯರೂಪದಲ್ಲಿರುವ ಯೋಜನೆಗಳಿಂದ ಸುಮಾರು 472ಟಿ.ಎಂ.ಸಿ. ನೀರನ್ನು ಉಪಯೋಗ ಮಾಡಬಹುದಾಗಿದೆ.

ಗಡಿ ಪ್ರದೇಶಗಳಲ್ಲಿರುವ ತಾಲ್ಲೂಕುಗಳ ಅಭಿವೃದ್ಧಿ

11 - ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗಡಿ ಪ್ರದೇಶದಲ್ಲಿರುವ ತಾಲ್ಲೂಕುಗಳ ಅಭಿವೃದ್ಧಿಗಾಗಿ 1990-91-92-93-94-95 ವರ್ಷಗಳಲ್ಲಿ ನಿಗಧಿಪಡಿಸಿರುವ ಹಣದ ಮೊತ್ತವೆಷ್ಟು?

ಆ) ಕೆಲವೇ ತಾಲ್ಲೂಕ್‌ಗಳಿಗೆ ಹೆಚ್ಚಿನ ಮೊತ್ತವನ್ನು ಮಂಜೂರು ಮಾಡಿರುವ ಬಗ್ಗೆ ಮುಖ್ಯ ಕಾರಣಗಳೇನು? - ಆ ತಾಲ್ಲೂಕ್ ಗಳ ಹೆಸರು ಮತ್ತು ಮಂಜೂರಾದ ಹಣದ ಮೊತ್ತವೆಷ್ಟು?

ಇ) ಹಿಂದಿನ ಬಜೆಟ್ ಅಧಿವೇಶನದಲ್ಲಿ ಮಾಜಿ ಹಣಕಾಸಿನ ಮಂತ್ರಿಗಳು ವರ್ಷಕ್ಕೆ ಒಟ್ಟು ರೂ.15 ಕೋಟಿಗಳು ಮಂಜೂರು ಮಾಡುತ್ತೇವೆ ಎಂದು ಆಶ್ವಾಸನೆ ಕೊಟ್ಟಿರುವ ಪ್ರಯುಕ್ತ ಆ ಆಶ್ವಾಸನೆಯನ್ನು ಉಳಿಸಿಕೊಳ್ಳಲು ಸರ್ಕಾರದವರು ತಕ್ಕ ಕಾರ್ಯಕ್ರಮ ಕೈಗೊಳ್ಳುವರೇ?

ಈ) ಇಂತಹ ಗಡಿ ಪ್ರದೇಶದ ತಾಲ್ಲೂಕುಗಳೆಷ್ಟು, ಜಿಲ್ಲಾವಾರು ಸಂಖ್ಯೆ ಅವುಗಳ ಕೆಲಸಗಳೇನು?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) 1990-91ನೇ ಸಾಲಿನ ಗಡಿ ಪ್ರದೇಶ ಅಭಿವೃದ್ಧಿ ಕಾರ್ಯಕ್ರಮಕ್ಕೆ ರೂ.5 ಕೋಟಿಗಳನ್ನು ಮಂಜೂರು ಮಾಡಲಾಗಿದೆ. 1991-92ನೇ ಸಾಲಿನಿಂದ 1994-95ರ ವರೆಗೆ ಪ್ರತಿ ವರ್ಷಕ್ಕೆ ರೂ.10 ಕೋಟಿಗಳಂತೆ ಹಣವನ್ನು ಒದಗಿಸಲು ಉದ್ದೇಶಿಸಲಾಗಿದೆ.